**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹರಪನಹಳ್ಳಿ.**

**ಸಿ.ಸಿ. ನಂಃ 121/2018**

P.W.1

C.W.1

ಸಾಕ್ಷಿದಾರರ ಹೆಸರು : ಬಸವರಾಜ್ ಜಿ

ತಾಯಿಯ ಹೆಸರು : ಕರಿಯಮ್ಮ

ವಯಸ್ಸು : 39 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 23-12-2021

ಉದ್ಯೋಗ : ಮುಖ್ಯೋಪಾಧ್ಯಾಯರು ಸರ್ಕಾರಿ ಕಿರಿಯ ಪ್ರಾ ಶಾಲೆ

ವಾಸ ಸ್ಥಳ : ಬೆಂಡಿಗೆರೆ ಸಣ್ಣ ತಾಂಡ

**ಮುಖ್ಯ ವಿಚಾರಣೆಃ ಶ್ರೀ ಎಂ ಎಂ ವಕೀಲರಿಂದಃ ಪಿರ್ಯಾದಿದಾರರ ಪರ**

1979-80 ನೇ ಸಾಲಿನ ದಾಖಲಾತಿ ಸಂಖ್ಯೆ:38 ರಲ್ಲಿ ಎಸ್.ಉಮಾಪತಿ ತಂದೆ ಸಕ್ರಾನಾಯ್ಕ ಹೆಸರು ನಮೂದಾಗಿದೆ. ಸದರಿ ದಾಖಲೆಯನ್ನು ಪೋಷಕರ ಮಾಹಿತಿಯಂತೆ ಆಗಿನ ಮುಖ್ಯೋಪಾಧ್ಯಾಯರು ಬರೆದಿರುತ್ತಾರೆ. ನಮ್ಮ ಶಾಲೆಯ ಮೂಲ ದಾಖಲೆಯಾಧಾರದ ಮೇಲೆ ನಾನು ಈಗ ತಂದಿರುವ ಸದರಿ ಎಸ್ ಉಮಾಪತಿ ತಂದೆ ಸಕ್ರ್ಯಾನಾಯ್ಕರವರ ಹೆಸರನ್ನು ನಮೂದಿಸಿರುತ್ತೇನೆ. ಈ ದಿನ ಎಸ್ ಉಮಾಪತಿ ತಂದೆ ಸಕ್ರಾನಾಯ್ಕರವರ ಶಾಲಾ ದೃಢೀಕರಣ ಮತ್ತು ದಾಖಲಾತಿ ರಿಜಿಸ್ಟರಿನ ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು - 1 ನೇ ಆರೋಪಿ ಪರ ವಕೀಲರಿಂದಃ**

ನಿಪಿ-56 ಮತ್ತು 57 ರ ದಾಖಲೆಯನ್ನು ನಾನು ಮೂಲ ದಾಖಲೆಯನ್ನು ನೋಡಿ ಬರೆದು ತಂದಿರುತ್ತೇನೆಂದರೆ ಸರಿ. ಸದರಿ ನಿಪಿ-57 ರ ಮೂಲ ದಾಖಲೆಯನ್ನು ಯಾರು ಹೇಳಿ ಬರೆಸಿರುತ್ತಾರೆಂದು ನಮೂದು ಇರುವುದಿಲ್ಲವೆಂದರೆ ಸರಿ, ಯಾರು ಹೇಳಿ ಬರೆಸಿರುತ್ತಾರೆ ಗೊತ್ತಾ ಎಂದರೆ ಸಾಕ್ಷಿ 1979-80 ರಲ್ಲಿದ್ದ ಆಗಿನ ಮುಖ್ಯೋಪಾಧ್ಯಾಯರು ಬರೆದಿರುತ್ತಾರೆ ನನಗೆ ಗೊತ್ತಿಲ್ಲ. ನಿಪಿ-57 ರ ದಾಖಲೆಯನ್ನು ಬರೆದಿರುವ ವ್ಯಕ್ತಿಗಳು ಇಂತಹದೇ ವ್ಯಕ್ತಿಗಳು ಬರೆದಿರುತ್ತಾರೆಂದು ಹೇಳಲು ಆಗುವುದಿಲ್ಲ. ಯಾರು ಬರೆದರೆಂದು ಅವರ ಹೆಸರು ಹೇಳಲು ಆಗುತ್ತದೆಯಾ ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ಎಸ್ .ಉಮಾಪತಿ ಎಂಬ ವ್ಯಕ್ತಿ ಯಾರು ಇಲ್ಲವೆಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನ್ಯಾಯಾಲಯದಿಂದ ಬಂದ ಸಮನ್ಸನಲ್ಲಿ ಉಮಾನಾಯ್ಕ ತಂದೆ ಸಕ್ರಾನಾಯ್ಕ ಮತ್ತು ಆತನ ದಾಖಲಾತಿ ಸಂಖ್ಯೆ ಬರೆದಿದ್ದ ಕಾರಣ ನಾನು ತಂದು ಹಾಜರುಪಡಿಸಿದ್ದೇನೆಂದು ಹೇಳುತ್ತಾರೆ. ನೀವು ತಂದು

ಹಾಜರುಪಡಿಸಿರುವ ವ್ಯಕ್ತಿಯ ದಾಖಲೆಗಳು ಮತ್ತು ನ್ಯಾಯಾಲಯದಿಂದ ಬಂದ ಸಮನ್ಸನಲ್ಲಿ ಕೇಳಿರುವ ವ್ಯಕ್ತಿಯ ದಾಖಲೆಗಳು ಬೇರೆ ಬೇರೆ ಎಂದರೆ ಸಾಕ್ಷಿ ಶಾಲಾ ದಾಖಲಾತಿ ಸಂಖ್ಯೆ ಒಂದೇ ಇರುತ್ತದೆ ಆದರೆ ವ್ಯಕ್ತಿಯ ಹೆಸರು ಬೇರೆ ಇದೆ ಎನ್ನುತ್ತಾರೆ.

**<u>ಪಾಟೀ ಸವಾಲು – 3 ರಿಂದ 5 ಮತ್ತು 8 ನೇ ಆರೋಪಿ ಪರ ವಕೀಲರಿಂದಃ</u>**

ನ್ಯಾಯಾಲಯದಿಂದ ನಿಮಗೆ ಬಂದ ಸಮನ್ಸನ್ನು ನೋಡಿದರೆ ಗುರುತಿಸುತ್ತೀರಾ ಎಂದರೆ ಗುರುತಿಸುತ್ತೇನೆ ಎಂದು ಹೇಳುತ್ತಾರೆ. ಸಾಕ್ಷಿಗೆ ನ್ಯಾಯಾಲಯದಿಂದ ಬಂದ ಸಮನ್ಸನ್ನು ಈಗ ತೆರೆದ ನ್ಯಾಯಾಲಯದಲ್ಲಿ ತೋರಿಸಿದಾಗ ಸಾಕ್ಷಿ ಅದನ್ನು ನೋಡಿ ನನಗೆ ಬಂದ ಸಮನ್ಸ ಎಂದು ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಸಮನ್ಸನ್ನು ನಿಡಿ–1 ಎಂದು ಗುರುತಿಸುತ್ತಾರೆ. ನಿಡಿ–1 ರಲ್ಲಿ ನನಗೆ ನ್ಯಾಯಾಲಯದಿಂದ ಉಮಾನಾಯ್ಕ ತಂದೆ ಸಕ್ರ್ಯಾನಾಯ್ಕ ರವರ ಶಾಲಾ ದಾಖಲಾತಿಯನ್ನು ತರಲು ನಿರ್ದೇಶನವಾಗಿರುತ್ತದೆಂದರೆ ಸರಿ. ನಿಪಿ–2 ರ ನಿಮ್ಮ ಶಾಲೆಯ ದಾಖಲಾತಿಯಲ್ಲಿ ಉಮಾನಾಯ್ಕ ತಂದೆ ಸಕ್ರಾನಾಯ್ಕ ಎಂದು ಬರೆದಿಲ್ಲವೆಂದರೆ ಸರಿ. ನಿಮ್ಮ ಶಾಲೆಯ ನಿಪಿ–1 ಮತ್ತು 2ರ ಶಾಲಾ ದಾಖಲೆಗಳಲ್ಲಿ ನಮೂದಾಗಿರುವ ಹೆಸರು ಎಸ್.ಉಮಾಪತಿ ತಂದೆ ಸಕ್ರ್ಯಾನಾಯ್ಕ ಆದರೆ ನಿಡಿ–1 ರಲ್ಲಿ ಬರೆದಿರುವ ಹೆಸರು ಉಮಾನಾಯ್ಕ ತಂದೆ ಸಕ್ರನಾಯ್ಕ ಎಂದು ನಮೂದು ಇದೆ ಎಂದರೆ ಸರಿ ನೀವು ನ್ಯಾಯಾಲಯದಿಂದ ನಿಡಿ–1 ರ ಸಮನ್ಸನ್ನು ಪಡೆದ ನಂತರ ನಿಮ್ಮ ಶಾಲಾ ದಾಖಲಾತಿ ಸಂಖ್ಯೆ:38/1979–80 ರಲ್ಲಿರುವ ಹೆಸರು ಮತ್ತು ನ್ಯಾಯಾಲಯದಿಂದ ಪಡೆದ ಸಮನ್ಸನಲ್ಲಿರುವ ಹೆಸರು ವ್ಯತ್ಯಾಸ ಇದೆ ಎಂದು ಹಿಂಬರಹ ನೀಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಇರಲಿಲ್ಲವೆಂದು ಹೇಳುತ್ತಾರೆ. ನೀವು ಉದ್ದೇಶಪೂರ್ವಕವಾಗಿ ಸಮನ್ಸನಲ್ಲಿರುವ ವ್ಯಕ್ತಿಯನ್ನು ಗಮನಿಸದೇ ಕೇವಲ ದಾಖಲಾತಿ ಸಂಖ್ಯೆ: 38/1979–80 ಇರುವುದನ್ನು ನೋಡಿ ಮಾತ್ರ ತಂದು ನಿಪಿ–1 ಮತ್ತು 2ರ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸರಿ. ಎಸ್.ಉಮಾಪತಿ ತಂದೆ ಸಕ್ರ್ಯಾನಾಯ್ಕ ಮತ್ತು ಉಮಾನಾಯ್ಕ ತಂದೆ ಸಕ್ರನಾಯ್ಕ ಎರಡೂ ಹೆಸರುಗಳೂ ಬೇರೆ ಬೇರೆ ಎಂದರೆ ಸರಿ ಆದುದರಿಂದ ಎಸ್.ಉಮಾಪತಿ ತಂದೆ ಸಕ್ರ್ಯಾನಾಯ್ಕ ಎಂಬ ವ್ಯಕ್ತಿ ಬೇರೆ ಮತ್ತು ಉಮಾನಾಯ್ಕ ತಂದೆ ಸಕ್ರನಾಯ್ಕ ಎಂಬ ವ್ಯಕ್ತಿ ಬೇರೆ ಎಂದರೆ ಸರಿ

**<u>ಮರು ವಿಚಾರಣೆಃ– ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ.